ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಭ್ರಷ್ಟಾಚಾರದಿಂದ ತುಂಬಿತುಳುಕುತ್ತಿದ್ದು, ಈ ಭ್ರಷ್ಟಾಚಾರವನ್ನು ಹೋಗಲಾಡಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಾಗುವುದು ? ಈ ಜಲ ಮಂಡಳಿಯಲ್ಲಿ ಬೇರು ಬಿಟ್ಟಿರುವ ಸ್ವಾರ್ಥಪರ ಹಿತಾಸಕ್ತಿ ಮತ್ತು ಕೆಲವು ಉನ್ನತ ಅಧಿಕಾರಿಗಳು ಬಿಡ್ತಿ ಹೊಂದಿ ಸರ್ಕಾರದಿಂದ ವರ್ಗಾವಣೆ ಆದೇಶ ನೀಡಿದ್ದರೂ ಅವರನ್ನು ಬಿಡುಗಡೆಗೊಳಿಸದೆ ವರ್ಗಾವಣೆ ಯಾಗಿ ಹೋಗದೆ ಇನ್ನೂ ಮಂಡಳಿಯಲ್ಲಿ ಉಳಿಸಿಕೊಳ್ಳುವ ಹಿನ್ನೆಲೆ ಏನು ? ಈ ಎಲ್ಲಾ ವಿಷಯದತ್ತ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಒತ್ತಾಯಪಡಿಸುತ್ತೇನೆ.

೧–೩೦ ಪಿ. ಎಂ.

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಬಂದಿತ್ತು. ಒಂದೇ ವಿಷಯಕ್ಕೆ ಸಂಬಂಧಪಟ್ಟ ವಿಚಾರಗಳು ಒಂದೇ ದಿನದಲ್ಲಿ ಎರಡು ಸಲ ಮೂರು ಸಲ ಬರುತ್ತವೆ. ಇವರಿಗೆ ೧೯೮೬ ಜನವರಿ ೧೯೮೭ರಿಂದ ಸಂಬಳ ಕೊಡುವ ಶೀರ್ಷಿಕೆಯನ್ನು ಜಲಮಂಡಳಿಯವರು ತೆಗೆದುಕೊಂಡಿದ್ದಾರೆ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದೇನೆ. ಅದೇ ಉತ್ತರ ಇಲ್ಲೂ ಕೂಡ. ಆದರೆ ರೂಪಾಯಿ ಎಲ್ಲಿಂದ ಬರಬೇಕು? ನೀರಿನ ಬೆಲೆಯನ್ನು ಹತ್ತು ಪೈಸೆ, ಹದಿನೈದು ಪೈಸೆ ಜಾಸ್ತಿ ಮಾಡಿದರೆ ಎಲ್ಲಾ ಕಡೆಯಿಂದಲೂ ವಿರೋಧ ಬರುತ್ತದೆ. ಹೀಗಾದರೆ ಹಣವನ್ನು ಎಲ್ಲಿಂದ ಉತ್ಪತ್ತಿ ಮಾಡುವುದು ಎನ್ನುವುದನ್ನು ಕೂಡ ಸನ್ಮಾನ್ಯ ಸದಸ್ಯರು ನೆನಪಲ್ಲಿ ಇಟ್ಟುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ಬಿ. ಮಲ್ಲಪ್ಪನವರೇ ನೀವು ಹೇಳಿ.

ಶ್ರೀ ಕೆ. ಬಿ. ಮಲ್ಲಪ್ಪ.—ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್‌ಗೆ ಸಂಬಂಧಪಟ್ಟಂತೆ ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ಇದು ಗಮನ ಸೆಳೆಯುವುದಲ್ಲ. ಷಿಫರ್ ನೋಟೀಸ್ ಇದು. ಓದಿ ಹೇಳಿ.

ಶ್ರೀ ಕೆ. ಬಿ. ಮಲ್ಲಪ್ಪ.—ಒಂದು ಪಾಸ್ಟಪೋಶವನ್ನು ಹೇಳುವುದಾದರೆ.....

ಅಧ್ಯಕ್ಷರು.—ನೋಟೀಸನ್ನು ಓದಿ ಹೇಳಿ. ಭಾಷಣ ಮಾಡುವುದಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ನನ್ನ ಹತ್ತಿರ ಅದರ ಪ್ರತಿ ಇಲ್ಲ.

ಅಧ್ಯಕ್ಷರು.—ಅದನ್ನು ನೀವು ವಕೀಲರು ಕೇಸ್ ಫೈಲ್ ಇಟ್ಟುಕೊಂಡಹಾಗೆ ಇಟ್ಟಿರಬೇಕು. ಒಂದು ಪ್ರತಿಯನ್ನು ನಿಮಗೆ ಕಳಿಸಿಕೊಡಲಾಗುತ್ತದೆ. ಈಗ ಓದಿ ಹೇಳಿ.

(೧೩) ಪಂಚಾಯತಿಗಳಲ್ಲಿ ಹಾಲಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಸರಕಾರದವರು ಜಾರಿಗೆ ತಂದಿರುವ ಮಂಡಲ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ತು ಕಾಯಿದೆ ಮೇರೆಗೆ, ಈಗ ಹಾಲಿ ಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿರುವ ಬಿಲ್ ಕಲೆಕ್ಟರ್, ಟೈಪಿಂಡರ್, ಪಾಟರ್‌ಮನ್ ಹಾಗೂ ಸ್ವೀಪರ್ ಇವರುಗಳ ಕೆಲಸವು ಅನಿಶ್ಚಿತತೆ ಉಂಟಾಗಿರುವುದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಇವರುಗಳು ಸುಮಾರು ೧೫,೦೦೦ ನೌಕರರು ಕಷ್ಟಕ್ಕೆ ಸಿಕ್ಕಿಕೊಳ್ಳುವವರಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ಪಂಚಾಯತಿಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರು ಏನಿದ್ದಾರೆ ಅವರ ವಿದ್ಯಾರ್ಹತೆಯನ್ನು ಪರಿಗಣಿಸಿ ಮಂಡಲ ಪಂಚಾಯತ್ ಕಾರ್ಯನಿರ್ವಹಣೆಗೆ ಯಾರ್ಯಾರು ಬೇಕಾಗಿದ್ದಾರೆ ಎಂದು ಮಂಡಲ್ ವ್ಯವಸ್ಥೆಯಲ್ಲಿ ಸೇರಿಸತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಈಗಾಗಲೇ ಕೈಗೊಂಡಿದೆ. ಅವರ ಪ್ರಕಾರವೇ ಈ ಕಾರ್ಯಕ್ರಮವನ್ನು ತಂದಿದ್ದೇವೆ.

(೧೪) ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರುಗಳನ್ನು ಖಾಯಂಗೊಳಿಸುವುದು

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಉದ್ದೋದ್ದಗಲ ಮತ್ತು ತರಬೇತಿ ಇಲಾಖೆಯ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿಯಿವೆ ಎಂದು ಲೋಕಸೇವಾ ಆಯೋಗದಲ್ಲಿನೇ ಮೇ ತಿಂಗಳಲ್ಲಿ ಪ್ರಸಟಿಸಿದೆಯಾಗಿ ತಿಳಿದುಬಂದಿದೆ. ಈ ಹಾಲಿ ಖಾಲಿಇರುವ ಹುದ್ದೆಗಳಲ್ಲಿ ಗಳಿರಿ ಇಷ್ಟು ಸುಮಾರು ವಿದ್ಯಾರ್ಹತೆಗಳ ಹಿಂದೆ 'ರೋಷ್ಟರ್' ವಿಧಾನದಂತೆ ಆಯ್ಕೆಯಾಗಿ